# ವಿಶ್ವನಂದಿನಿ ಲೇಖನಮಾಲೆ — 138

## ಶ್ರಾದ್ಧದಲ್ಲಿ ವಿಷ್ಣುಸ್ಮರಣೆ

ಧರ್ಮಶಾಸ್ತ್ರಗಳಲ್ಲಿ ದೇವರ ಪೂಜೆಯ ಕುರಿತು, ವ್ರತಗಳ ಕುರಿತು ಅದೆಷ್ಟು ನಿಯಮಗಳನ್ನು ತಿಳಿಸಲಾಗಿದೆಯೋ ಅದಕ್ಕಿಂತ ಹೆಚ್ಚಿನ ನಿಯಮಗಳನ್ನು ಶ್ರಾದ್ಧದ ಕುರಿತಾಗಿ ತಿಳಿಸಲಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ದೇವರ ಪೂಜೆ ಮಾಡುವದು ಸುಲಭ. ಶ್ರಾದ್ಧ ಮಾಡುವದು ಕಷ್ಟ. ಕಾರಣ, ದೇವರಪೂಜೆಯ ನಿಯಮಗಳಿಗಿಂತಲೂ ಶ್ರಾದ್ಧದ ನಿಯಮಗಳು ಅತೀ ಕಟ್ಟುನಿಟ್ಟು.

ಶ್ರಾದ್ಧದಲ್ಲಿ ಕಬ್ಬಿಣ ಬಳಸುವ ಹಾಗಿಲ್ಲ. ತಾಂಡವಾಲದ ಅಗ್ಗಿಷ್ಟಿಕೆಯಲ್ಲಿಯೋ ಸೌದೆ ಒಲೆಯಲ್ಲಿಯೋ ಅಡಿಗೆ ಮಾಡಬೇಕು.

ಅಡಿಗೆಯವರ ಕೈಯಲ್ಲಿ ಅಡಿಗೆ ಮಾಡಿಸುವ ಹಾಗಿಲ್ಲ[1].

ಬೇರೆಯವರ ಮನೆಯಲ್ಲಿ ಶ್ರಾದ್ಧ ಮಾಡುವ ಹಾಗಿಲ್ಲ. ನಮ್ಮ ಮನೆಯಲ್ಲಿಯೇ ಮಾಡಬೇಕು. ಬೇರೆಯವರ ಮನೆಯಲ್ಲಿ ಮಾಡಿದರೆ ಸ್ಥಳಕ್ಕೆ ಹಣ ನೀಡಿ ಮಾಡಬೇಕು. ಇಲ್ಲದಿದ್ದರೆ ನಮ್ಮ ಪಿತೃಗಳಿಗೆ ಮುಟ್ಟುವದಿಲ್ಲ.

ಶ್ರಾದ್ಧಕ್ಕೆ ಬಳಸುವ ನೀರು ಶುದ್ಧವಾಗಿರಬೇಕು. ಪದಾರ್ಥಗಳು ಶುದ್ಧವಾಗಿರಬೇಕು. ಬ್ರಾಹ್ಮಣರು ಉತ್ತಮರಾಗಿರಬೇಕು. (ಇವತ್ತಿನ ಯಾವ ಬ್ರಾಹ್ಮಣರೂ ಶ್ರಾದ್ಧದಲ್ಲಿ ಊಟ ಮಾಡುವಷ್ಟು ಯೋಗ್ಯತೆಯನ್ನು ಉಳಿಸಿಕೊಂಡಿಲ್ಲವಾದ್ದರಿಂದ ದರ್ಭೆಗಳಲ್ಲಿಯೇ ಋಷಿಗಳನ್ನು ಆವಾಹಿಸಿ ಅವರಿಗೆ ಊಟಕ್ಕೆ ಬಡಿಸಬೇಕು. ಪ್ರತ್ಯಕ್ಷ ಬ್ರಾಹ್ಮಣರನ್ನು

---

[1] ಶ್ರಾದ್ಧಕ್ಕಾಗಿ ಬಂದ ಬಾಂಧವರಿಗೆ, ಬ್ರಾಹ್ಮಣ ಸಮಾರಾಧನೆಗೆ ಅಡಿಗೆಯವರ ಕೈಯಲ್ಲಿ ಮಾಡಿಸಬಹುದು. ಆದರೆ, ಶ್ರಾದ್ಧದಲ್ಲಿ ದರ್ಭೆಯ ಬ್ರಾಹ್ಮಣರಿಗೆ ಬಡಿಸುವ ಅಡಿಗೆಯನ್ನು ಕರ್ತೃವಿನ ಹೆಂಡತಿಯೇ ಮಾಡಬೇಕು. ಮಗ ಶ್ರಾದ್ಧ, ಸೊಸೆ ಅಡಿಗೆ ಮಾಡಿದರೇ ಶ್ರಾದ್ಧ ಸಂಪನ್ನವಾಗುವದು.

ಕೂಡಿಸಬಾರದು.) ದರ್ಭೆ ಶುದ್ಧವಾಗಿರಬೇಕು. ಪಿಂಡಕ್ಕೆ ಆಸನವಾಗಿ ಹಾಕುವ ದರ್ಭೆಗಳನ್ನು ಒಮ್ಮೆ ಮಾತ್ರ ಕತ್ತರಿಸಬೇಕು. ಎರಡು ಬಾರಿ ಕತ್ತರಿಸಿದ್ದರೆ ಉಪಯೋಗವಿಲ್ಲ.

ಹೀಗೆ ನೂರಾರು ನಿಯಮಗಳನ್ನು ಶಾಸ್ತ್ರ ವಿಧಿಸುತ್ತದೆ. ಇವತ್ತಿನ ದಿವಸವಂತೂ ಮನೆಯಲ್ಲಿ ಶ್ರಾದ್ಧ ಮಾಡಲಿಕ್ಕಾಗದ ಪರಿಸ್ಥಿತಿಯನ್ನೇ ನಮ್ಮ ಸಮಾಜ ಮುಟ್ಟಿಬಿಟ್ಟಿದೆ.

ಸಾಂವತ್ಸರಿಕಶ್ರಾದ್ಧವನ್ನು, ಮಹಾಲಯಶ್ರಾದ್ಧವನ್ನು ಮನೆಯಲ್ಲಿಯೇ ಮಾಡಬೇಕು. ಸಾಧ್ಯವೇ ಇಲ್ಲದ ಪಕ್ಷದಲ್ಲಿ ಬೇರೆಯ ಕಡೆಯ ಮಾಡಬಹುದು. ಅದು ಅಧಮಪಕ್ಷ.

ತೀರ್ಥಶ್ರಾದ್ಧವನ್ನು ತೀರ್ಥಕ್ಷೇತ್ರಗಳಲ್ಲಿಯೇ ಮಾಡಬೇಕು.

ಹೀಗೆ ನಿಯಮಜಟಿಲವಾದದ್ದು ಶ್ರಾದ್ಧ.

ಆದರೆ, ಈ ಎಲ್ಲ ನಿಯಮಗಳನ್ನು ಪಾಲಿಸಲು ಕೆಲವು ಬಾರಿ ಸಾಧ್ಯವೇ ಆಗುವದಿಲ್ಲ.

ನಿಯಮಗಳನ್ನು ಪಾಲಿಸುವಾಗಲೂ ಚ್ಯುತಿಯಾಗುವದು ಸಹಜ.

ಆದರೆ, ಶ್ರೀಹರಿ ಕರುಣಾಳು. ಅವನು ಸರ್ವೋತ್ತಮ. ನಮ್ಮ ಭಕ್ತಿಗೆ ಮತ್ತು ಶ್ರದ್ಧೆಗೆ ಮೆಚ್ಚುವ ಸ್ವಾಮಿ ಅವನು. ಶ್ರಾದ್ಧದಲ್ಲಿ ಒಂದು ನಿಯಮ ತಪ್ಪಿದರೂ ಪಿತೃಗಳು ದೇವತೆಗಳು ಸ್ವೀಕರಿಸುವದಿಲ್ಲ. ಆದರೆ, ನಿಯಮ ತಪ್ಪದೆ ಮಾಡಲು ನಮಗೆ ಸಾಧ್ಯವೇ ಇಲ್ಲ. ಹಾಗಾದರೆ ನಾವು ಮಾಡುವ ಶ್ರಾದ್ಧ ವ್ಯರ್ಥವಾಗುವದಿಲ್ಲವೇ ಎಂದರೆ ಪರಮಾತ್ಮನ ಕಾರುಣ್ಯ ನಮಗುತ್ತರವನ್ನು ನೀಡುತ್ತದೆ.

**ಮಂತ್ರತಃ ತಂತ್ರತಃ ಛಿದ್ರಂ**
**ದೇಶಕಾಲಾರ್ಹವಸ್ತುತಃ ।**
**ಸರ್ವಂ ಕರೋತಿ ನಿಶ್ಛಿದ್ರಂ**
**ಅನುಸಂಕೀರ್ತನಂ ತವ ॥**[2]

---

[2] ಸಂಸ್ಕೃತ ಬಾರದವರ ಅನುಕೂಲಕ್ಕಾಗಿ ಶಬ್ದಗಳನ್ನು ಬಿಡಿಸಿ ಬರೆದಿದ್ದೇನೆ. ವಸ್ತುತಃ , "ಮಂತ್ರತಸ್ತಂತ್ರತಶ್ಛಿದ್ರಂ ದೇಶಕಾಲಾರ್ಹವಸ್ತುತಃ । ಸರ್ವಂ ಕರೋತಿ ನಿಶ್ಛಿದ್ರಮನುಸಂಕೀರ್ತನಂ ತವ" ಎಂದು ಪಠಿಸಬೇಕು

ನಾವು ಹೇಳುವ ಮಂತ್ರದಲ್ಲಿ, ಮಾಡಬೇಕಾದ ತಂತ್ರದಲ್ಲಿ, ಶ್ರಾದ್ಧ ಮಾಡುವ ದೇಶದಲ್ಲಿ, ಕಾಲದಲ್ಲಿ, ಶ್ರಾದ್ಧಕ್ಕೆ ಬಳಸುವ ವಸ್ತುಗಳಲ್ಲಿ ದೋಷವಿದ್ದರೆ ಶ್ರಾದ್ಧ ಸಂಪನ್ನವಾಗುವದೇ ಇಲ್ಲ. ಆದರೆ, ಶ್ರಾದ್ಧ ಮಾಡುವ ಪ್ರತೀಕ್ಷಣದಲ್ಲಿಯೂ ಶ್ರೀಮನ್ನಾರಾಯಣನ ಸ್ಮರಣೆಯನ್ನು ಮಾಡುತ್ತಿದ್ದಲ್ಲಿ ಪರಮಾತ್ಮ ಆ ದೋಷಗಳನ್ನು ಪರಿಹರಿಸುತ್ತಾನೆ.

ಹೀಗಾಗಿ ಶ್ರಾದ್ಧದ ಪ್ರತೀಸಂದರ್ಭದಲ್ಲಿ, ಮುಖ್ಯವಾಗಿ ಬ್ರಾಹ್ಮಣಭೋಜನ, ಪಿಂಡಪ್ರದಾನಗಳ ಸಂದರ್ಭದಲ್ಲಿ ಭಕ್ತಿಯಿಂದ ದೇವರ ಹೆಸರನ್ನು ಮನಸ್ಸಿನಲ್ಲಿಯೇ ಸ್ಮರಿಸುತ್ತಿರಬೇಕು. ನಮ್ಮ ಆಂತರಿಕ ಭಕ್ತಿಯಿಂದಾದರೂ ನಾವು ಮಾಡುವ ಶ್ರಾದ್ಧ ಸಂಪನ್ನವಾಗುತ್ತದೆ.

ಕಾರಣ, ಇವತ್ತಿನ ದಿವಸ ಶ್ರಾದ್ಧ ಮಾಡಿಸುವ ಪುರೋಹಿತರೂ ಮಂತ್ರಗಳ ಅರ್ಥವನ್ನು ತಿಳಿದಿರುವದಿಲ್ಲ. ಕರ್ತೃವಿಗಂತೂ ಗೊತ್ತೇ ಇರುವದಿಲ್ಲ. ಇನ್ನು ಪದಾರ್ಥಗಳ ಅಶುದ್ಧಿಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲದಕ್ಕೆ

ಕಲಶವಿಟ್ಟಂತೆ ಶ್ರಾದ್ಧದಲ್ಲಿ ಪ್ಲಾಸ್ಟಿಕ್ಕು ಸ್ಟೀಲುಪಾತ್ರೆಗಳ ಸವಾರಿ.

ಶ್ರಾದ್ಧದಲ್ಲಿ ನಮ್ಮ ಅಜ್ಞಾನ ಅಶಕ್ತಿಗಳಿಂದ ಛಿದ್ರವಾದರೆ ಭಗವಂತನ ಸ್ಮರಣೆ ಕಾಯುತ್ತದೆ. ಆದರೆ, ಮಾಡುವ ತಪ್ಪನ್ನು ಒಪ್ಪ ಇಟ್ಟುಕೊಳ್ಳುತ್ತಾರೆ ಇವತ್ತಿನ ಜನ. ಪ್ಲಾಸ್ಟಿಕ್ಕು ಇಲ್ಲದೇ ಇದ್ದರೆ ಬೇರೆ ಯಾವುದರಲ್ಲಿ ತರೋದು, ಎಲ್ಲರ ಮನೆಯಲ್ಲಿಯೂ ಬೆಳ್ಳಿ ಬಂಗಾರಗಳ ಪಾತ್ರೆ ಮಾಡಲಿಕ್ಕಾಗುತ್ತ ಅಂತೆಲ್ಲ.

ಹಾಗಂತ ಮಾಡಲಿಕ್ಕೆ ಸಾಧ್ಯವಾಗುವದನ್ನೂ ಮಾಡದೇ ಇದ್ದರೆ ಹೇಗೆ. ಶ್ರಾದ್ಧದ ಪೂರ್ಣ ಮಂತ್ರಗಳು ಬೇಡ, ಪಿಂಡಪ್ರದಾನದ ಮಂತ್ರವನ್ನಾದರೂ ಕಲಿಯದಿದ್ದರೆ ಹೇಗೆ? ಬೆಳ್ಳಿಯ ಪಾತ್ರೆ ಬೇಡ, ಸ್ಟೀಲನ್ನು ಬಳಸದೇ ಕಂಚಿನ ಪಾತ್ರೆಯನ್ನಾದರೂ, ಅದೂ ಸಾಧ್ಯವಿಲ್ಲದಿದ್ದರೆ ಕಲಾಯಿ ಹಾಕಿದ ಹಿತ್ತಾಳೆಯ ಪಾತ್ರೆಯನ್ನಾದರೂ ಬಳಸಿದ್ದರೆ ಹೇಗೆ?

ಮೊದಲಿಗೆ ನಮ್ಮಿಂದಾಗುತ್ತಿರುವ ತಪ್ಪನ್ನು ಒಪ್ಪಿಕೊಳ್ಳುವ ದೊಡ್ಡತನವನ್ನು ತೋರೋಣ. **“ಸ್ವಾಮಿ, ನಮ್ಮ ತಪ್ಪನ್ನು ಮನ್ನಿಸು, ನೀಡುತ್ತಿರುವ ಅನ್ನವನ್ನು ಜನ್ಮ ನೀಡಿದ ತಂದೆ ತಾಯಿಗಳಿಗೆ ಮುಟ್ಟಿಸು”** ಎಂದು ಭಕ್ತಿಯಿಂದ ಪ್ರಾರ್ಥಿಸಿಕೊಳ್ಳೋಣ.

ಶ್ರಾದ್ಧದಲ್ಲಿ ಏನಿರಲಿ ಬಿಡಲಿ, ನಿರಂತರ ವಿಷ್ಣುಸ್ಮರಣೆಯಿರಲಿ. ತಂದೆತಾಯಿಗಳ ಬಗೆಗೆ ಪೂರ್ಣ ಗೌರವವಿರಲಿ. ಶ್ರಾದ್ಧದ ನಿಯಮಗಳ ಕುರಿತು ಶ್ರದ್ಧೆಯಿರಲಿ.

ಯಾವುದೇ ಕರ್ಮವನ್ನು ಸಫಲಗೊಳಿಸುವದು, ಮಹಾಫಲಗೊಳಿಸುವದು ನಮ್ಮ ಅಂತರಂಗದ ಭಕ್ತಿ ಜ್ಞಾನಗಳೇ ಎನ್ನುವದು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಸಿದ್ಧಾಂತ —

**“ತಥಾಽಪ್ಯನಂತಫಲದಾಃ ಕರ್ತುರೇವ ಮಹಾಗುಣಾಃ”**

ನಮ್ಮಲ್ಲಿರಬಹುದಾದ ಸಕಲ ಸದ್ಗುಣಗಲ್ಲಿಯೇ ಸರ್ವೋತ್ತಮವಾದದ್ದು ವಿಷ್ಣುಭಕ್ತಿ. ಆ ವಿಷ್ಣುಭಕ್ತಿಪುರಸ್ಸರವಾಗಿ ಭಗವಂತನ, ದೇವತೆಗಳ, ಗಯಾ ಬದರೀ ಉಡುಪೀ ಕ್ಷೇತ್ರಗಳ, ಗಂಗಾ, ಗೋದಾವರೀ, ಕೃಷ್ಣಾ, ಕಾವೇರೀ ಮುಂತಾದ ತೀರ್ಥಗಳ, ಗುರುಗಳ ಸ್ಮರಣೆಯನ್ನು ಮಾಡುತ್ತ ಶ್ರಾದ್ಧವನ್ನು ಮಾಡೋಣ.

ಭಕ್ತಿಯಿಂದ ವಿಷ್ಣುಸ್ಮರಣೆ ಮಾಡುತ್ತ ಶ್ರಾದ್ಧ ಮಾಡುವವರ ಕರ್ಮ ಸಫಲವಾಗಲಿ ಎಂದು ಮಧ್ವಾಂತರ್ಯಾಮಿಯಾದ ಉಡುಪಿನ ಕೃಷ್ಣನನ್ನು ಪ್ರಾರ್ಥಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491